

ನಾವೆಲ್ಲರೂ ಜೊತೆಯಲ್ಲೇ ಇರಬಹುದು. ನಮಗೇನೂ ಅಭ್ಯಂತರವಿಲ್ಲ' ಅಪ್ಪ ಹೇಳಿದರು.

'ಬಾ. ಎಷ್ಟೋ ವರ್ಷ ನಿನ್ನನ್ನು ಬಿಟ್ಟು ಇದ್ದು ಬಿಟ್ಟೆವು. ಅವತ್ತು ನಮಗೂ ತಿಳಿಯಲಿಲ್ಲ. ಜೊತೆಯಲ್ಲಿದ್ದರೆ ನಮಗೂ ಸಂತೋಷ' ಅಮ್ಮ ಹೇಳಿದರು.

'ಬಂದು ಬಿಡು ಪಳ್ಳಿ. ಒಬ್ಬಳೇ ಆಗಿಬಿಡಬೇಡ. ನಾವೆಲ್ಲ ಇದ್ದೇವೆ' ಎಂದದ್ದು ಅಣ್ಣ.

ಟೀಚರ್ ನನ್ನ ಮುಖ ನೋಡಿದ್ದರು. ನಾನು ನಕ್ಕು ಬಿಟ್ಟೆ. ಅವತ್ತು ಸಾಧುವಿನ ಮಾತು ಮತ್ತೆ ಮತ್ತೆ ಕಿವಿಯಲ್ಲಿ ಮೊಳಗಿತ್ತು 'ಈ ಜಗತ್ತು ಬಹಳ ಕೆಟ್ಟದಿದೆ ಮಗಳೇ...' ಜೋರಾಗಿ ನಕ್ಕವಳಿಗೆ ನೆನಪಾದದ್ದು ಶುನಶ್ಯೇಪ. (ಸತ್ಯಹರಿಶ್ಚಂದ್ರನನ್ನು ವರುಣನ ಶಾಪದಿಂದ ಬಿಡಿಸಲು ಬಲಿಪಶುವಾಗಿ ನಿಂತವನು. ಹಿರಿಮಗ ತಂದೆಗೆ, ಕಿರಿಮಗ ತಾಯಿಗೆ... ನಡುವಿನವನು ಶುನಶ್ಯೇಪ... ಯಾರಿಗೂ ಬೇಡವಾದ. ಅವನನ್ನು ಬಲಿಯಾಗುವುದರಿಂದ ತಪ್ಪಿಸಿ ದೊಡ್ಡ ಋಷಿಯಾಗಿ ದೇವರಾತನಾಗಿ ಬೆಳೆಸಿದವನು ವಿಶ್ವಾಮಿತ್ರ ಋಷಿ. ಅವನನ್ನು ಮತ್ತೆ ಪಡೆಯಲು